# ಶ್ರೀವಿಜಯದಾಸರ ಕೃತ

# ಶ್ರೀ ವಾದಿರಾಜರ ಸುಳಾದಿ

*ಧ್ರುವತಾಳ*

ಮಾಧವನಂಘ್ರಿ ನಿತ್ಯ ಮೋದದಿಂದಲಿ ಭಜಿಪ
ಸಾಧು ಸನ್ಮುನಿವರ್ಯ ಮೋದತೀರ್ಥರ
ಪದವಿಗೆ ಬರುವ ಲಾತವ್ಯ ಮೇದಿನಿಯೊಳು
ಮಾಯಾವಾದಿಗಳ ಗೆದ್ದ ವಾದಿರಜರ ಮಹಿಮೆ
ವರ್ಣಿಸಲು ಶೇಷಗಳವಲ್ಲ
ಮಾಧವ ವೇದವೇದ್ಯ ನಮ್ಮ ವಿಜಯವಿಠಲ
ಆದದರಿಂದವರೆರಡು ಭುಜದಿ ಹಯವಕ್ತ್ರನಾಗಿ
ಪಾದವನಿಟ್ಟು ಸ್ವಾದವಾದ ಕಡಲೆ ಹೂರಣವನುಂಡ
ಶ್ರೀಧರನ ಮಹಿಮೆ ಸಾಧು ಜನರು ಕೇಳಿ ॥ ೧ ॥

*ಮಟ್ಟತಾಳ*

ಕಡಲಲಿ ಪವಡಿಸಿದಾ ಒಡೆಯ ತಾ ಪೊಡವಿಯಲಿ
ಮೃಡನುತ ಗೋವಿಂದಾ ಜಡದ್ಧರಿವಾಣದಲಿ
ಕಡಲೆ ಸಕ್ಕರೆ ಬೆರೆಸಿ ಮಡ್ಡಿ ಮಾಡಿದ
ಸಡಗರದಾ ಭಕ್ಷ್ಯ ಲಡ್ಡುಗೆ ಪಾಯಸ ಘೃತ-
ದಡುಗೆ ಬ್ರಹ್ಮಾದಿ ಪರಿವಾರಸಹಿತುಂಡು
ಒಡೆಯ ಬ್ರಹ್ಮಾದಿಗಳ ಭೀತಿ ಬಿಡಿಸಿದ
ಕಾಡೆಗೋಲು ನೇಣು ಪಿಡಿದುಡುಪಿಯೊಳಗೆ ನಿಂದ
ಉಡುರಾಜಮುಖ ನಮ್ಮ ವಿಜಯವಿಠಲರೇಯ
ಬೆಡಗು ಕಾರ್ಯವನ್ನು ನಡೆಸಿದ ಬಗೆ ಕೇಳಿ ॥ ೨ ॥

*ತ್ರಿಪುಟತಾಳ*

ತಾಮಸ ಗುಣವುಳ್ಳ ಪಾಮರ ಜನರಿಗೆ
ಈ ಮಹಿಮೆ ದೊರಕುವುದೇ ಸ್ವಾಮಿ ಸಿಲುಕುವನೆ
ಕಾಮಿಸಿ ಕೋಟಿ ವರುಷ ನಾಮ ನುಡಿದುದರಿಂದ ಪರಂ
ಧಾಮ ದೊರೆಯದು ಭೂಮಿಯೊಳಗೆ ಬಂದ

ಭ್ರಾಮಕ ಜನರಿಗೆ ದೊರಕುವನೇ ಸ್ವಾಮಿ ಸಿಲುಕುವನೇ ॥ ೩ ॥

*ಅಟತಾಳ*

ಅಜ ಸತ್ಯಲೋಕಾಧಿಪತ್ಯವನು ಮಾಡಿ ದಿ-
ಗ್ವಿಜಯ ಮಾಡಲು ಪುರಕೆ
ನಿಜ ಸುಜ್ಞಾನ ಸುಪೂರ್ಣಪ್ರಜ್ಞರೆಂಬೋ ಮುನಿಯು
ಅಜನ ಪದಕೆ ಬಂದು ಅಖಿಳರನಾಳುತ್ತಿಪ್ಪ
ನಿಜವಾಯು ಹನುಮ ಭೀಮ ಮಧ್ವರಾಯರು
ಅಜನ ಪಟ್ಟಾಭಿಷಿಕ್ತರಾಗಿ ನಿಜ ಸತ್ಯಲೋಕವನಾಳಿದ
ವಿಜಯಸಾರಥಿ ಪದರಜ ಮಹಾತ್ಮೆಯಿಂದ
ಗಜವ್ಯೆರಿ ಭಂಜನ ವಿಜಯವಿಠಲನ್ನ
ಭಜನೆ ಗೈಯುತ ಬಹು ಕಾಲ
ಋಜುಗಣ ಪಂಜ್ತಿಯೊಳಗೆ ಕುಳಿತು,
ನಿಜನಿರ್ಮಲ ಸುಜ್ಞಾನದಿಂದ
ಭುಜಗಶಾಯನನಲ್ಲಿ ಎಡಬಿಡದೆ ಸ್ನೇಹಮಾಡುತ
ಋಜುಗಳಲ್ಲಿ ಪಕ್ವವಾದ ಮನವುಳ್ಳ
ಸುಜನ ಶಿರೋಮಣಿ ವಾದಿರಾಜರೆನುತ
ನಿಜವಾಗಿ ಬೊಮ್ಮಾಂಡ ಪುರಾಣ ಸಾಧಕದಿಂದ
ಅಜನ ಪದ ಸಲುವುದು ಲೇಶ ಸಂಶಾಯ ಬ್ಯಾಡಿ
ನಿಜ ನಿಜ ನಿಜವೆಂದು ನಿತ್ಯದಿ ಕೊಂಡಾಡಿ ॥ ೪ ॥

*ಆದಿತಾಳ*

ಮನಶುದ್ಧರಾಗಿ ಮಾಧವನಂಘ್ರಿ
ದಿನದಿನದಲ್ಲಿ ನಂಬಿ ಅನವರತ
ಆನಂದಪಡುವ ಮಧ್ವರಾಯರ ಪಾದದ ಮಹಿಮೆ
ಅನೇಕ ಜನ್ಮ ಬಹುಪುಣ್ಯದಿಂದ ಲಬ್ಧ-
ವೆನುತ ತಿಳಿಯಲುಬೇಕು
**ಹನುಮೇಶ ಸಿರಿ ವಿಜಯವಿಠಲನ ಪಾದ**
**ವನಜಾದಿಗಳನ್ನು ನಂಬಿಕೊಂಡಿಪ್ಪ ವಾದಿರಾಜ**
**ಮುನಿಯು ಸಾಮಾನ್ಯರೆಂದು ಎಣಿಸಿದ ನರರಿಗೆ**

**ಘನವಾದ ಶಿಕ್ಷೆಯೀವನು ಇನಸೂನು ಕೋಪದಿಂದ**
**ಮನದಲಿ ಇಟ್ಟುಕೊಂಡು ಮಹಿಮೆ ಪಾಡಿ ಕೊಂಡಾಡಿ**

***ಜತೆ***

ಮೋದತೀರ್ಥರ ಮತ ಸೇನಾಧಿಪತಿಯಾದ
ವಾದಿರಾಜ ಮುನಿಯು **ವಿಜಯವಿಠಲ**ನ ದಾಸ ॥ ೫ ॥

॥ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ॥

ಋಣ:- (ಪುಸ್ತಕ)ಹರಿದಾಸರು ಕಂಡ ಶ್ರೀವಾದಿರಾಜರು
ಗಣಕೀಕರಣ: ಹರೀಶ ಕೆಂಪದಾಳಿಹಳ್ಳಿ